ಕರ್ನಾಟಕ ಸರ್ಕಾರ

ಸಂಖ್ಯೆ: ಟಿಟಿಇ/65/ಇಎಫ್ಎಸ್/2018

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:14/02/2019

**ಜ್ಞಾಪನ**

ವಿಷಯ:- 2019 ಏಪ್ರಿಲ್/ಮೇ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳ ಪೂರೈಕೆ ಕೆಲಸಕ್ಕಾಗಿ ನೌಕರರನ್ನು ನಿಯೋಜನೆ ಮಾಡಿರುವ ಬಗ್ಗೆ

ಉಲ್ಲೇಖ:-1)ಈ ಕಛೇರಿ ಸುತ್ತೋಲೆ ಸಂಖ್ಯೆ: ಟಿಟಿಇ/65/ಇಎಫ್ಎಸ್/2018 ದಿ:17/12/2018
2)ಈ ಕಛೇರಿ ಜ್ಞಾಪನ ಸಂಖ್ಯೆ: ಟಿಟಿಇ/45/ಇಸಿಎಸ್ (3)/2018 ದಿ:06/02/2019

******

2019 ಏಪ್ರಿಲ್/ಮೇ ಡಿಪ್ಲೊಮೊ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳ ಬೇಡಿಕೆಯನ್ನು ಕಳುಹಿಸಿಕೊಡುವಂತೆ ಉಲ್ಲೇಖ (1) ರ ಪತ್ರದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳಿಂದ ಕೋರಲಾಗಿತ್ತು. ಅದರಂತೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಿಂದ ಬೇಡಿಕೆ ಸಲ್ಲಿಸಿರುತ್ತಾರೆ. ಪ್ರಯುಕ್ತ, ಅವಶ್ಯಕತೆ ಇರುವ ಮುಖ್ಯ/ಪ್ರಾಯೋಗಿಕ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ನೋಡಲ್ ಸೆಂಟರ್‌ಗಳ ಮೂಲಕ ಎಲ್ಲಾ ಸಂಸ್ಥೆಗಳಿಗೆ ಹಂತ ಹಂತವಾಗಿ ಕಳುಹಿಸಿ ಕೊಡಬೇಕಾಗಿರುತ್ತದೆ. ಉಲ್ಲೇಖ (2) ರನ್ವಯ ಕೆಳಕಂಡ ಸಿಬ್ಬಂದಿಗಳನ್ನು ಈಗಾಗಲೇ ತಾಂತ್ರಿಕ ಪರೀಕ್ಷಾ ಮಂಡಳಿಯ 2018 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್‌ನ ಮರುಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸಲು ದಿನಾಂಕ:06/02/2019 ರಿಂದ ಮುಂದಿನ ಆದೇಶದವರೆಗೆ ನಿಯೋಜಿಸಲಾಗಿದ್ದು, ಮುಂದುವರೆಸುತ್ತಾ, ಇಎಫ್ಎಸ್ ವಿಭಾಗದ ಪರೀಕ್ಷಾ ಪೂರ್ವ ಕೆಲಸಗಳಾದ 2019 ಏಪ್ರಿಲ್/ಮೇ ಡಿಪ್ಲೊಮೊ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಸ್ಥೆವಾರು, ಜಿಲ್ಲಾವಾರು, ನೋಡಲ್ ಸೆಂಟರ್‌ವಾರು ವಿಂಗಡಿಸಿ, ಬಂಡಲ್ ಮಾಡುವ ಕಾರ್ಯನಿರ್ವಹಿಸಲು ದಿನಾಂಕ:15/02/2019 ರಿಂದ ಮುಂದಿನ ಆದೇಶದವರೆವೆಗೂ ಈ ಕೆಳಕಂಡ ಸಿಬ್ಬಂದಿಯವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಸದರಿ ಅವಧಿಯನ್ನು "ಅನ್ಯ ಕರ್ತವ್ಯದ ಅವಧಿ" ಎಂದು ಪರಿಗಣಿಸಲಾಗುವುದು. ಸದರಿಯವರು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರ.ಸಂ | ಹೆಸರು ಮತ್ತು ಪದನಾಮ | ಸಂಸ್ಥೆಯ ಹೆಸರು |
|---|---|---|
| 01 | ಅರಸು ಹೆಚ್.ಆರ್.<br>ಯಾಂತ್ರಿಕರು | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ |
| 02 | ಜಾರ್ಜ್ ವಿಲಿಯಮ್ಸ್,<br>ಯಾಂತ್ರಿಕರು | ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ |
| 03 | ರಂಗಸ್ವಾಮಿ ಕೆ.ಆರ್.<br>ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 04 | ಪ್ರವೀಣ್‌ಕುಮಾರ್ ಹೆಚ್,<br>ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 05 | ಶಿವಣ್ಣ ಟಿ. ಎಸ್.,<br>ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 06 | ಎಂ.ಎಸ್. ರೇವಣ್ಣ,<br>ಗ್ರೂಪ್-ಡಿ | ಎ.ಪಿ.ಎಸ್.ಪಾಲಿಟೆಕ್ನಿಕ್, ಸೋಮನಹಳ್ಳಿ. |

ಜಂಟಿ ನಿರ್ದೇಶಕರು (ಪರೀಕ್ಷೆ)

**ಇವರಿಗೆ,**

1.ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ, ಮುಂದಿನ ಕ್ರಮಕ್ಕಾಗಿ
2.ಪ್ರಾಂಶುಪಾಲರು, ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ, ಮುಂದಿನ ಕ್ರಮಕ್ಕಾಗಿ
3.ಪ್ರಾಂಶುಪಾಲರು, ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು, .ಮುಂದಿನ ಕ್ರಮಕ್ಕಾಗಿ
4.ಪ್ರಾಂಶುಪಾಲರು, ಎ.ಪಿ..ಎಸ್.ಪಾಲಿಟೆಕ್ನಿಕ್,ಬೆಂಗಳೂರು, ಮುಂದಿನ ಕ್ರಮಕ್ಕಾಗಿ
5.ಸಂಯೋಜನಾಧಿಕಾರಿಗಳು, ಇ-ಆಡಳಿತ, ವಿಭಾಗ-ಅಂತರ್ಜಾಲಕ್ಕೆ ಅಳವಡಿಸುವ ಸಲುವಾಗಿ
6.ಮೇಲ್ಕಂಡ ಸಿಬ್ಬಂದಿಯವರಿಗೆ ಪ್ರಾಂಶುಪಾಲರ ಮೂಲಕ.